# 31-10-2023


VIDYAVARDHAKA SANGHA(R), MYSURU
VIDYAVARDHAKA FIRST GRADE COLLEGE
Sheshadri Iyer Road, Mysuru – 570 001
National Unity Day
Tributes to Sardar Vallabhbhai Patel
NATIONAL
UNITY
DAY
LET US MAKE THE MOST OF OUR MANPOWER AND MAKE INDIA GROW
"Rashtriya Ekta Diwas"
Q
A
Date: 31-10-2023 Tuesday | Time: 11.30 AM | Venue Lecture Room # 10



# ರಾಷ್ಟ್ರೀಯ ಏಕತಾ ದಿವಸ

ಸ್ವಾತಂತ್ರ್ಯ ನಂತರ ನೂರಾರು ರಾಜಮನೆತನಗಳಿಂದ ಕೂಡಿದ್ದ ಭರತ ಖಂಡವನ್ನು "ಭಾರತ ದೇಶ" ಎಂಬ ಒಕ್ಕೂಟ ವ್ಯವಸ್ಥೆಗೆ ಸೇರಿಸಲು ಪಟೇಲ್‌ರು ಮಾಡಿದ ಪ್ರಯತ್ನವೇ ಇಂದು ಭಾರತ ವಿಶ್ವಗುರುವಾಗಿ ನಿಲ್ಲಲು ನಾಂದಿಯಾಯಿತು ಎಂದು ಡಾ.ಬಿ.ಟಿ.ರಘು. ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು **"ಭಾರತ ರತ್ನ ಸರ್ದಾರ್ ವಲ್ಲಭ ಬಾಯ್ ಪಟೇಲ್"** ಅವರ 148ನೇ ಜನ್ಮದಿನೋತ್ಸವದ ಪ್ರಯುಕ್ತ **"ರಾಷ್ಟ್ರಿಯ ಏಕತಾ ದಿವಸ್"** ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಭಾಗವಹಿಸಿ ಮಾತನಾಡುತ್ತಿದ್ದ ಅವರು ಒಕ್ಕೂಟ ವ್ಯವಸ್ಥೆಗೆ ಭಾಷಾವಾರು ಪ್ರಾಂತ್ಯಗಳು ಹಾಗೂ ರಾಜಮನೆತನಗಳನ್ನು ಒಗ್ಗೂಡಿಸುವಲ್ಲಿ ಅವರ ಕಾರ್ಯತಂತ್ರಗಳಿಗೆ ಹಲವರ ವಿರೋಧವಿದ್ದರೂ ಸಹ ಅವರ ದಿಟ್ಟ ನಡೆಯಿಂದಲೇ ಅವರು ಉಕ್ಕಿನ ಮನುಷ್ಯ ಎಂಬ ಹೆಗ್ಗಳಿಗೆ ಪಾತ್ರಾರಗಿದ್ದಾರೆ. 2014ರಿಂದ ಈಚೆಗೆ ಪಟೇಲ್‌ರ ಜನ್ಮ ದಿನಾಚರಣೆಯನ್ನು **"ರಾಷ್ಟ್ರೀಯ ಏಕತಾ ದಿವಸ್"** ಎಂದು ರಾಷ್ಟ್ರದಾದ್ಯಂತ ಆಚರಣೆಗೆ ತರಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರವರು ಮಾತನಾಡುತ್ತಾ ಸರ್ದಾರ್ ವಲ್ಲಭಬಾಯ್ ಪಟೇಲ್‌ರ ಜೀವನ ಹಾಗೂ ವ್ಯಕ್ತಿತ್ವವು ಎಲ್ಲರಿಗೂ ಮಾದರಿಯಾದದ್ದು. ಸ್ವಾತಂತ್ರ್ಯ ಪೂರ್ವ ಭಾರತವನ್ನು ಕಂಡಿದ್ದ ಅವರು ಸ್ವಾತಂತ್ರ್ಯಾ ನಂತರ ಆಡಳಿತ ವ್ಯವಸ್ಥೆಗೆ ಚುರುಕು ಮೂಡಿಸಿ, ಬಡವರಿಗಾಗಿಯೇ ಹಲವಾರು ಯೋಜನೆಗಳನ್ನು ರೂಪಿಸಿ ದೇಶದ ಏಳ್ಗೆಗೆ ಅಡಿಪಾಯ ಹಾಕಿದರು. ದೇಶದ ಆಡಳಿತ ವ್ಯವಸ್ಥೆಯಲ್ಲಿ ಉನ್ನತ ಹುದ್ದೆಗೆ ಏರುವ ಅವಕಾಶವಿದ್ದರೂ ಸಹ ದೂರದಿಂದಲೇ ಆಡಳಿತ ವಯವಸ್ಥೆಗೆ ಸಹಕರಿಸುವ ಮುಖೇನ "United we Stand divided we fall" ಎಂಬ ಧ್ಯೇಯ ವ್ಯಾಖ್ಯೆಯಂತೆ ಬದುಕಿದ ಅಪ್ಪಟ ರಾಷ್ಟ್ರಪ್ರೇಮಿ ಅವರು ಎಂದು ತಿಳಿಸಿದರು. ಕಛೇರಿ ಅಧೀಕ್ಷಕರಾದ ಶ್ರೀಮತಿ.ಸುನೀತ.ಡಿ, ಹಿರಿಯ ಪ್ರಾಧ್ಯಾಫಕರಾದ ಪ್ರೊ.ಸವಿತ.ಕೆ.ಎಸ್, ಅಧ್ಯಾಪಕ ಸಲಹೆಗಾರರಾದ ಪ್ರೊ.ಪಲ್ಲವಿ.ಡಿ ಅವರು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
















VIDYAVARDHAKA SANGHA(R), MYSURU
VIDYAVARDHAKA FIRST GRADE COLLEGE
Sheshadri Iyer Road, Mysuru – 570 001
National Unity Day
Tributes to Sardar Vallabhbhai Patel
NATIONAL
UNITY
DAY